ಇದನ್ನು ನೋಡಿ ನೋಡಿ ಕಲಿತ ಅಕ್ಷಯ್ ಇದೀಗ ಹಲವು ವಿಧದ ರಂಗೋಲಿಗಳಲ್ಲಿ ಪರಿಣತರು. ರಿಯಲಿಸ್ಟಿಕ್ ರಂಗೋಲಿ, ಹೈಪರ್ ರಿಯಲಿಸ್ಟಿಕ್ (ಎಚ್‌ಡಿ. ಕ್ವಾಲಿಟಿಯದ್ದು), ತ್ರಿಡಿ ರಂಗೋಲಿ, ಫ್ಲ್ಯಾಷ್ ರಂಗೋಲಿ ಮುಂತಾದ ಅತ್ಯಾಧುನಿಕ ವಿಧಾನಗಳ ರಂಗೋಲಿಗಳು ಅಕ್ಷಯ್ ಸೃಜನಶೀಲತೆಗೆ ಸಾಕ್ಷಿಯಾಗಿವೆ. ವ್ಯಕ್ತಿಚಿತ್ರಗಳನ್ನು ಯಥಾವತ್ ಆಗಿ ರಂಗೋಲಿಗಳಲ್ಲಿ ಪಡಿಮೂಡಿಸುವುದು ಅಕ್ಷಯ್ ವೈಶಿಷ್ಟ್ಯ.

ತುಂಟ ಕೃಷ್ಣನ ಚಿತ್ರ, ಪೇಜಾವರ ಶೀಗಳು, ತುಮಕೂರಿನ ಸಿದ್ಧಗಂಗಾಮಠದ ಶಿವಕುಮಾರ್ ಸ್ವಾಮೀಜಿ. ಮಹಾತ್ಮ ಗಾಂಧಿ, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್, ಮೋದಿ, ಕ್ಲಿಂಟನ್ ಅಲ್ಲದೆ ಸಾಲುಮರದ ತಿಮ್ಮಕ್ಕ, ಸುಧಾಮೂರ್ತಿ, ವಿಷ್ಣುವರ್ಧನ್ ಜೊತೆಗೆ ದೇವರ ಪ್ರತಿಕೃತಿ, ಪ್ರಕೃತಿ... ಎಲ್ಲವೂ ರಂಗೋಲಿಗಳಲ್ಲಿ ಜೀವ ಪಡೆದುಕೊಂಡಿವೆ. ಇದರೊಂದಿಗೆ ಸಿನಿಮಾ ಸ್ಟಿಲ್‌ಗಳನ್ನೂ ರಂಗೋಲಿಯಲ್ಲಿ ಸೃಷ್ಟಿಸಿದ್ದಾರೆ. ಉಪೇಂದ್ರ, ದಬಾಂಗ್‌ನ ಸುದೀಪ್–ಸಲ್ಮಾನ್‌ಖಾನ್ ಚಿತ್ರಗಳು ರಂಗೋಲಿಯಲ್ಲಿ ಅರಳಿವೆ.

ರಂಗೋಲಿ ಕಲೆಯನ್ನು ಹಲವು ಗಣ್ಯರು ನೋಡಿ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ. ಆರ್ಟ್ ಆಫ್‌ಲಿವಿಂಗ್‌ನ ರವಿಶಂಕರ್ ಗುರೂಜಿ, ಸಿನಿಮಾತಾರೆ ಉಪೇಂದ್ರ ಮುಂತಾದವರು ಅಕ್ಷಯ್ ಅವರನ್ನು ಸನ್ಮಾನಿಸಿ ರಂಗೋಲಿ ಕಲೆಯನ್ನು ಮುಂದುವರೆಸಿಕೊಂಡು ಹೋಗುವಂತೆ ಬೆನ್ನು ತಟ್ಟಿದ್ದಾರೆ.

## ರಂಗೋಲಿಯಲ್ಲಿ ಆಸಕ್ತಿ ಹೇಗೆ?

ಇದು ಸುಮಾರು 16 ವರ್ಷಗಳಷ್ಟು ಹಿಂದಿನ ಕಥೆ. ತನ್ನ ಎಂಟನೇ ವರ್ಷದಲ್ಲೇ ಮನೆಯಿಂದ ವಿದ್ಯಾಪೀಠ ಆಶ್ರಮಕ್ಕೆ ಬಂದು ಸೇರಿದ ಇವರು, ಮೊದಲು ಹವ್ಯಾಸಕ್ಕಾಗಿ ರಂಗೋಲಿ ಹಾಕಲು ಶುರು ಮಾಡಿದರು. ಮುಂದೆ ಆಶ್ರಮದಲ್ಲಿ ನಡೆಯುವ ಪೂಜೆ ಪುನಸ್ಕಾರಗಳ ಸಂದರ್ಭದಲ್ಲಿ ಮಂಡಲ ಹಾಕುವಾಗ ತಾನೇ ತ್ರಿಕೋನ, ಚೌಕ, ವೃತ್ತಾಕಾರದ ಮಂಡಲ ರಂಗೋಲಿಪುಡಿಯಲ್ಲಿ ಬರೆದರು. ಅದು ಚೆನ್ನಾಗಿ ಮೂಡಿಬಂದಿಲ್ಲ ಎಂದು ಪುರೋಹಿತರು ಇವರ ಕಣ್ಣಮುಂದೆಯೇ ಅಳಿಸಿ ಹಾಕಿ ಹೊಸದಾಗಿ ಮಂಡಲ ಹಾಕಿದರು. ಹಾಗೆ ಮಂಡಲ ಹಾಕುವುದನ್ನು ನೋಡಿ ನೋಡಿ ಅಭ್ಯಾಸ ಮಾಡಿ ರಂಗೋಲಿ ಕಲೆಯನ್ನು ಸಿದ್ಧಿಸಿಕೊಂಡರು.

ಮುಂದೆ ರಂಗೋಲಿಯಲ್ಲೇ ವ್ಯಕ್ತಿಚಿತ್ರ ಅಭ್ಯಾಸ ಮಾಡುವುದರ ಜೊತೆಗೆ ಫ್ರೀಹ್ಯಾಂಡ್ ರಂಗೋಲಿಯನ್ನು ಶ್ರದ್ಧೆಯಿಂದ ಕಲಿತರು. ಯಾವುದೇ ಗುರುಮುಖೇನ ಕಲಿತ ವಿದ್ಯೆ ಅಲ್ಲ. ಸ್ವತಃ ನೋಡಿ ನೋಡಿ ಕಲಿತು ಇದರಲ್ಲೇ ಹೊಸ ಹೊಸ ಪ್ರಯೋಗಕ್ಕೆ ಒಡ್ಡಿಕೊಂಡರು. ಇದರ ಪರಿಣಾಮವಾಗಿ ರಂಗೋಲಿಗೆ ಹೈಟೆಕ್ ಸ್ಪರ್ಶವೂ ಸಿಕ್ಕಿತು.

'ರಂಗೋಲಿ ಕಲೆ ಬಗ್ಗೆ ರಾಮಾಯಣ ಮಹಾಭಾರತಗಳಲ್ಲೂ ಉಲ್ಲೇಖವಿದೆ. ಲಕ್ಷ್ಮಿ ಶ್ರೀನಿವಾಸ ದೇವರನ್ನು ಒಲಿಸಿಕೊಂಡದ್ದು ಸುಂದರ ರಂಗೋಲಿ ಹಾಕುವ ಮೂಲಕವೇ. ರಂಗೋಲಿಗೆ ತೆಲುಗಿನಲ್ಲಿ ಮುಗ್ಗು, ತಮಿಳಿನಲ್ಲಿ ಕೋಲಂ ಮುಂತಾದ ಹೆಸರುಗಳೂ ಇವೆ. ರಂಗೋಲಿ ಔಟ್‌ಡೇಟೆಡ್ ಆಗಿದೆ ಎಂಬ ಮನೋಭಾವನೆ ಅನೇಕರಲ್ಲಿದೆ. ಹೀಗಾಗಿ ಈ ಕಲೆ ನಶಿಸುತ್ತಾ ಸಾಗಿದೆ. ಪುರಾತನ ಕಲೆಯನ್ನು ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಇದಕ್ಕಾಗಿಯೇ ರಂಗೋಲಿಯಲ್ಲಿ ಹಲವು ಹೊಸತನಗಳನ್ನು ಕಂಡುಕೊಂಡೆ' ಎನ್ನುತ್ತಾರೆ ಅಕ್ಷಯ್. 'ರಂಗೋಲಿಗೆ ಹೈಟೆಕ್ ಸ್ಪರ್ಶ ಕೊಡಬೇಕು. ಅಂತರರಾಷ್ಟ್ರೀಯ ರಂಗೋಲಿ ದಿನ ಆಚರಿಸಬೇಕು. ಈ ಪುರಾತನ ಕಲೆಯನ್ನು ಉಳಿಸಿ ಬೆಳೆಸಿ ಪೋಷಿಸಬೇಕು. ಸ್ವಂತಿಕೆ ಉಳಿಸಿಕೊಳ್ಳಬೇಕು' ಎಂದು ಸೈದ್ಧಾಂತಿಕವಾಗಿ ಮಾತನಾಡುವ ಅಕ್ಷಯ್ ಜಾಲಿಹಾಳ್ ಅವರು ಬೆಂಗಳೂರಿನ ಚಿತ್ರಕಲಾ ಪರಿಷತ್, ಟೀವಿ ಚಾನಲ್‌ಗಳಲ್ಲಿ, ರಿಯಾಲಿಟಿ ಶೋಗಳ ಸಂದರ್ಭಗಳಲ್ಲಿ ತಮ್ಮ ರಂಗೋಲಿ ಕೈಚಳಕವನ್ನೂ ತೋರಿಸಿ ಮೆಚ್ಚುಗೆ ಪಡೆದುಕೊಂಡಿದ್ದಾರೆ. ■





## ಆರೋಗ್ಯಕ್ಕೂ ರಂಗೋಲಿ

ಸಾಮಾನ್ಯವಾಗಿ ಪುಡಿ ರಂಗೋಲಿ ಸೇರಿದಂತೆ ಎಲ್ಲವನ್ನೂ ಅಂಗೈ ಚಿನ್ಮುದ್ರೆಯಿಂದ ಹಾಕುವುದು. ಇದರಿಂದ ಮೆದುಳಿಗೆ ಸಂವೇದನೆ ಹೋಗಿ ನರಗಳಲ್ಲಿ ಸಂಚಲನ ಉಂಟಾಗುತ್ತದೆ. ರಂಗೋಲಿಗೆ ತುಂಬುವ ಬಣ್ಣಗಳಿಂದ ಮನಸ್ಸಿಗೆ ಉಲ್ಲಾಸ, ಹುಮ್ಮಸ್ಸು ಬರುತ್ತದೆ. ಕ್ರಮಬದ್ಧವಾಗಿ ಹಾಕುವುದರಿಂದ ಏಕಾಗ್ರತೆಯೂ ಬೆಳೆಯುತ್ತದೆ. ಮಾನಸಿಕ ಒತ್ತಡವೂ ಕಡಿಮೆಯಾಗುತ್ತದೆ. ಪಂಚೇಂದ್ರಿಯಗಳು ಚುರುಕಾಗಿ ಕೆಲಸ ಮಾಡುತ್ತವೆ. ರಂಗೋಲಿ ಹಾಕಲು ತುಂಬ ಸಮಯ ತೆಗೆದುಕೊಳ್ಳುವುದರಿಂದ ತಾಳ್ಮೆ, ಶ್ರದ್ಧೆ, ಏಕಾಗ್ರತೆ, ಸ್ಫೂರ್ತಿ ಮುಂತಾದ ಮಾನವೀಯ ಗುಣಗಳನ್ನು ಮೈಗೂಡಿಸಿಕೊಳ್ಳುವಂತಾಗುತ್ತದೆ.

